ಕುಂಬಂಪಲ್ಲಿ ವಿಚಾರವನ್ನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಲಿಫ್ಟ್ ಸಬ್‌ಸ್ಟೇಷನ್ ಆಗಬೇಕು ಎಂದು ಇದೇ ರೀತಿಯಲ್ಲಿ ಗುಡಿಬಂಡೆಯಲ್ಲಿ ಕೂಡ ಇನ್ನೊಂದು ಸಬ್‌ಸ್ಟೇಷನ್ ಆಗಬೇಕಾಗಿದೆ. ಏನೇ ಆದರೂ ಕೂಡ ಗೌರಿಬಿದನೂರು ಮತ್ತು ಬಾಗೇಪಲ್ಲಿ ಲೈನ್ ಬದಲಾವಣೆ ಮಾಡದೇ ಇದ್ದರೆ ಸಮಸ್ಯೆ ಹಾಗೆಯೇ ಇರುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ತಾವು ಒಂದು ಪತ್ರ ಬರೆಯಿರಿ. ಯಾವ ಯಾವ ಕ್ರಮಗಳನ್ನು ಕೈಗೊಂಡರೆ ಆ ಪ್ರದೇಶದ ವಿದ್ಯುತ್ ಸರಬರಾಜಿನಲ್ಲಿ ಮತ್ತು ವೋಲ್ಟೇಜ್ ಮೈಂಟೆನೆನ್ಸ್‌ಗೆ ಅನುಕೂಲವಾಗುತ್ತದೆ ಎಂಬುದನ್ನು ನಾನು ಕೆ.ಇ.ಬಿ.ಗೆ ಅದನ್ನು ಕಳುಹಿಸುತ್ತೇನೆ.

ಕಾಸರಗೋಡು ಮತ್ತು ಭಟ್ಕಳ್ ಬಂದರುಗಳಲ್ಲಿ ಹೂಳೆತ್ತುವುದು

747 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕಾಸರಕೋಡು ಮತ್ತು ಭಟ್ಕಳ ಬಂದರುಗಳಲ್ಲಿ ಹೂಳುವಿನಿಂದ ತುಂಬಿರುವುದು ನಿಜವೆ?

ಆ) ಈ ಬಂದರುಗಳಲ್ಲಿ ಹೂಳೆತ್ತುವ ಕೆಲಸ ಎಷ್ಟು ವರ್ಷಗಳ ಹಿಂದೆ ನಡೆಯಿತು?

ಇ) ಈ ಬಂದರುಗಳಲ್ಲಿನ ಹೂಳೆತ್ತುವ ಕ್ರಮವನ್ನು ಸರ್ಕಾರ ಎಂದು ಕೈಗೆತ್ತಿಕೊಳ್ಳುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ನಿಜ

ಆ) 1983-84

ಇ) 75.00 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. 1995-96ನೇ ಸಾಲಿಗೆ ಹೂಳೆತ್ತುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಡಾ|| ಎಂ.ಪಿ. ಕರ್ಕಿ : ನನ್ನ ಪ್ರಶ್ನೆಗೆ 2 ಬಂದರುಗಳಿಗೆ 75 ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ 75 ಲಕ್ಷದಲ್ಲಿ ಕಾಸರಗೋಡು ಬಂದರಿಗೆ ಎಷ್ಟು, ಭಟ್ಕಳ ಬಂದರಿಗೆ ಎಷ್ಟು ಮತ್ತು ಈ ಹಣವನ್ನು ಮೀನುಗಾರಿಕೆ ಈ ಸೀಸನ್‌ನಲ್ಲೇ ಖರ್ಚು ಮಾಡುತ್ತೀರಾ ಎನ್ನತಕ್ಕಂತಹ ಎರಡು ಪ್ರಶ್ನೆಯನ್ನು ಕೇಳುತ್ತಾ ಇದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಈ 75 ಲಕ್ಷ ರೂಪಾಯಿಗಳು ಕೇವಲ ಭಟ್ಕಳಕ್ಕೆ ಮಾತ್ರ ಉಪಯೋಗ ಮಾಡುತ್ತಾ ಇದ್ದೇವೆ. ಹೊನ್ನಾವರದ ಬಗ್ಗೆ ಈವರೆಗೆ ಸರ್ವೆ ಮಾಡಿಸಿಲ್ಲ. ಅದನ್ನು ಸರ್ವೆ ಮಾಡಿಸಿ ಅದನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಈ ಸೀಸನ್‌ನಲ್ಲೇ ಮಾಡಿಸುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಭಟ್ಕಳದ್ದು ಈ ಸೀಸನ್‌ನಲ್ಲಿ 1995-96ರಲ್ಲಿ ಮಾಡಲಾಗುತ್ತದೆ.

ಡಾ|| ಎಂ.ಪಿ. ಕರ್ಕಿ : ಈ ಮೀನುಗಾರಿಕೆ ಸೀಸನ್ ಪ್ರಾರಂಭವಾಗುವುದು ಸಾಮಾನ್ಯವಾಗಿ ಅಕ್ಟೋಬರ್‌ನಿಂದ ಮೇ ತನಕ. ಇನ್ನೊಂದು 2-3 ತಿಂಗಳು ಉಳಿದಿದೆ. ಈ 2-3 ತಿಂಗಳಲ್ಲಿ ಪ್ರಾರಂಭ ಮಾಡುತ್ತೀರಾ ಎನ್ನತಕ್ಕಂತಹ ಪ್ರಶ್ನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : 1995-96ರಲ್ಲಿ ಮಾಡಿಸಿಕೊಡುತ್ತೇನೆ.

ಡಾ|| ಎಂ.ಪಿ. ಕರ್ಕಿ : ಸೀಸನ್ ಬಹಳ ಮುಖ್ಯವಾದುದು. ಮೀನುಗಾರಿಕೆ ಸೀಸನ್ ಅಂದರೆ ವರ್ಷದಲ್ಲಿ ಸಾಧಾರಣವಾಗಿ ಅಕ್ಟೋಬರ್‌ನಿಂದ ಮೇ ತನಕ. ಮಳೆಗಾಲದಲ್ಲಿ ಏನೂ ಸೀಸನ್ ಇರುವುದಿಲ್ಲ. ಮಳೆಗಾಲದಲ್ಲಿ ಮೀನುಗಾರರು ಹೊರಗೆ ಹೋಗುವುದೇ ಇಲ್ಲ. ಆದ್ದರಿಂದ 2 ತಿಂಗಳಲ್ಲಿ ಪ್ರಾರಂಭ ಮಾಡುತ್ತೀರೋ ಅಥವಾ ಸೀಸನ್ ಮುಗಿದ ನಂತರ ಮುಂದಿನ ವರ್ಷದ ಸೀಸನ್‌ನಲ್ಲಿ ಪ್ರಾರಂಭ ಮಾಡುತ್ತೀರಾ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗಾಗಲೇ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಹಣವನ್ನು ಒದಗಿಸಲಾಗಿದೆ. 1995-96ರ ಒಳಗಡೆ ಈ ಕೆಲಸವನ್ನು ಪೂರೈಸಿಕೊಡುತ್ತೇವೆ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಡಾ|| ಎಂ.ಪಿ. ಕರ್ಕಿ : ಇನ್ನೊಂದು ಪ್ರಶ್ನೆ, ಶರಾವತಿ ಸಂಗಮದಲ್ಲಿ ಪ್ರತಿವರ್ಷ 2-3 ಮೀನುಗಾರರುಗಳ ದೋಣಿ ಒಡೆದು ಹೋಗುತ್ತದೆ. ಅನೇಕ ಸಲ ಜೀವಹಾನಿ ಕೂಡ ಆಗುತ್ತಾ ಇದೆ. ಇಲ್ಲಿಯತನಕ ಸರ್ಕಾರಕ್ಕೆ ಇದರ ಬಗ್ಗೆ ಗಮನಕ್ಕೆ ಬಂದಿಲ್ಲವೇ ಎನ್ನುವ ಪ್ರಶ್ನೆ. ಇನ್ನೂ ಅದನ್ನು ಸರ್ವೆ ಮಾಡತಕ್ಕಂತಹ ಯೋಜನೆಗೆ ಗಮನ ಹರಿಸಿಲ್ಲ. ಈಗಾಗಲೇ ಅನೇಕ ಮನವಿಗಳನ್ನು ಸಲ್ಲಿಸಿದರೂ ಕೂಡ ಇನ್ನೂ ಸರ್ವೆ ಮಾಡತಕ್ಕಂತಹ ವಿಷಯ ತಮ್ಮ ಮುಂದೆ ಇದೆ ಎಂದು ಹೇಳುತ್ತಾರೆ. ಸರ್ವೆ ಯಾವಾಗ ಮಾಡುತ್ತಾರೆ? ಯಾವಾಗ ಮುಗಿಸುತ್ತಾರೆ? ಯಾವಾಗ ಕೈಗೆತ್ತಿಕೊಳ್ಳುತ್ತಾರೆ ಎನ್ನುವುದಕ್ಕೆ ಉತ್ತರ ಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಧ್ಯಕ್ಷರೆ, ಈ ಸೀಸನ್‌ನಲ್ಲಿ ಅದರ ಬಗ್ಗೆ ಸರ್ವೆ ಮಾಡಿಸಿ ಅದಕ್ಕೆ ಎಷ್ಟಾಗುತ್ತದೆ ಎಂಬುದನ್ನು ಅಸೆಸ್ ಮಾಡಿಸುತ್ತೇವೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಎರಡು ಬಂದರುಗಳ ಹೂಳು ಎತ್ತುವ ಕಾರ್ಯಕ್ರಮ 1983-94ರಲ್ಲಿ ಮಾಡಿದ್ದೇವೆಂದು ಹೇಳಿದ್ದಾರೆ. ಎಷ್ಟು ಪ್ರಮಾಣದಲ್ಲಿ ಹೂಳನ್ನು ಎತ್ತಿದ್ದಾರೆ? ಎಷ್ಟು ಹಣ ಖರ್ಚು ಮಾಡಿದ್ದಾರೆ? ಅದೇ ರೀತಿಯಲ್ಲಿ ಈ ಎರಡು ಬಂದರುಗಳಿಗೆ 75 ಲಕ್ಷ ರೂಪಾಯಿ ಆಡಳಿತ ಮಂಜೂರಾತಿ ದೊರಕಿದೆಯೆಂದು ಹೇಳಿದ್ದಾರೆ. ಯಾವಾಗ ಆಡಳಿತ ಮಂಜೂರಾತಿ ದೊರಕಿದೆ ಮತ್ತು ಈ ಹೂಳು ಎತ್ತುವ ಕಾರ್ಯಕ್ರಮ ಮೇ ಒಳಗೆ ಮುಗಿಸದಿದ್ದರೆ, ಪ್ರಾರಂಭ ಮಾಡದೇ ಇದ್ದರೆ ಬರುವ ವರ್ಷಕ್ಕೆ ಆಗುತ್ತದಾ? ಆದ್ದರಿಂದ ನಿರ್ದಿಷ್ಟವಾದ ಕಾರ್ಯಕ್ರಮ....

ಅಧ್ಯಕ್ಷರು : ನಿಮ್ಮದೇ ಮಾಹಿತಿ ಅಲ್ಲವೇ? ಆ ವೇಳೆಯಲ್ಲಿ ನೀವೇ ಅಲ್ಲವೇ ಇಲಾಖೆಯಲ್ಲಿದ್ದದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : 1995-96ರಲ್ಲಿ ಆಡಳಿತ ಮಂಜೂರಾತಿಯನ್ನು ಕೊಟ್ಟಿದೆ. ಹಿಂದೆ ಅವರೇ ಮಂತ್ರಿಗಳಾಗಿದ್ದರಿಂದ ಅವರಿಗೇ ಆ ಮಾಹಿತಿಗಳು ಗೊತ್ತಿದೆ. ಅದರಿಂದ ಹೆಚ್ಚಿನ ಮಾಹಿತಿಯನ್ನು ಕೊಡುವುದಕ್ಕಾಗುವುದಿಲ್ಲ.

ಡಾ॥ ಎಂ.ಪಿ. ಕರ್ಕಿ : ಅವರಿಗೆ ಗೊತ್ತಿದೆ ಎಂದು ಹೇಳುವುದು ಸಾಕಾಗುವುದಿಲ್ಲ. ನಮಗೂ ಕೂಡ, ಸದನಕ್ಕೆ ಗೊತ್ತಾಗಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಉತ್ತರ ಕೊಡಬೇಕೆಂದು ಮಾನ್ಯ ಮಂತ್ರಿಯವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಹಿಂದೆ 1983-84ರಲ್ಲಿ ಎಷ್ಟು ಹಣವನ್ನು ಒದಗಿಸಿದ್ದೀರಿ ಎಂದು ಕೇಳಿದ್ದಾರೆ. ಅದು 2,53,409 ರೂಪಾಯಿ ಖರ್ಚು ಮಾಡಿ ಹಿಂದೆ ಹೂಳು ಎತ್ತಿದ್ದಾರೆ. ಈಗ 75 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಶ್ರೀ ಡಾ॥ ಯು. ಚಿತ್ತರಂಜನ್ : ಈ ಭಟ್ಕಳ ಬಂದರು ಮತ್ತು ಕಾಸರಗೋಡು ಬಂದರು ಬಿಟ್ಟು ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಎಲ್ಲಾ ಬಂದರುಗಳಲ್ಲಿ ಹೂಳು ತುಂಬಿದೆ ಎಂದು ಮಾನ್ಯ ಮಂತ್ರಿಗಳೇ ಮೊನ್ನೆ ಉತ್ತರ ಕೊಟ್ಟಿದ್ದಾರೆ. ಅದರಲ್ಲಿಯೂ ಬೆಳ್ಳಕೆರೆಯಲ್ಲಿ ಒಳಗೆ ಬರಲಿಕ್ಕೆ ಸಾಧ್ಯ ಇಲ್ಲ ಎನ್ನುವಂತಹ ಒಂದು ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಆದರೆ ಆ ಬಜೆಟರಿ ಪ್ರಾವಿಷನ್‌ನಲ್ಲಿ ಅದಕ್ಕೆ ಏನೇ ಹಣವನ್ನು ಒದಗಿಸಿದ್ದುದು ನಮಗೆ ಕಾಣುತ್ತಾ ಇಲ್ಲ. ಹಾಗಾಗಿ ಮೀನುಗಾರಿಕಾ ಮಂತ್ರಿಗಳು ಇದನ್ನು ಹೇಗೆ ನಿರ್ವಹಿಸುತ್ತಾರೆ? ಬಜೆಟಿನಲ್ಲಿ ಹಣ ಒದಗಿಸಿದ್ದು ಎಲ್ಲಿಯೂ ಕಾಣುತ್ತಾ ಇಲ್ಲ. ಇದನ್ನು ಯಾವ ರೀತಿ ನಿರ್ವಹಿಸುತ್ತಾ ಇದ್ದೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಈ ಪ್ರದೇಶಗಳಿಗೆಲ್ಲಾ ನಾನೇ ಸ್ವತಃ ಭೇಟಿ ಕೊಟ್ಟು ನೋಡಿದ್ದೇನೆ. ಬಜೆಟ್ ಪ್ರಾವಿಷನ್ 20 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈಗಾಗಲೇ ಇದರ ಬಗ್ಗೆ ಬೆಳ್ಳಕೆರೆಯಲ್ಲಿ ಸಹ ನಾನು ನೋಡಿದ್ದೇನೆ. ಅಗತ್ಯವಾಗಿ ಆ ಕೆಲಸ ಆಗಬೇಕಾಗುತ್ತದೆ. ಅದರ ಬಗ್ಗೆ ನಾನು ಸರ್ವೆ ಮಾಡಿಸಿ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಕಡೂರು ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ ರಸ್ತೆಗಳ ಅಗಲವನ್ನು ಹೆಚ್ಚಿಸುವುದು

913 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿ ರಾಜ್ಯ ಹೆದ್ದಾರಿ ಎಷ್ಟು ಕಿ.ಮೀ. ಇದೆ, ರಸ್ತೆಯ ಅಗಲವೆಷ್ಟು?

ಆ) ಮುಂದಿನ ವರ್ಷ ರಸ್ತೆಯ ಅಪಘಾತವನ್ನು ತಪ್ಪಿಸಲು ಎಷ್ಟು ಕಿ.ಮೀ. ರಸ್ತೆಯ ಅಗಲವನ್ನು ಮಾಡಲಾಗುವುದೇ?

ಇ) ತಾಲ್ಲೂಕಿನಲ್ಲಿ ಎಂ.ಡಿ.ಆರ್. ಎಷ್ಟು ಕಿ.ಮೀ. ಇದೆ, ಇದರಲ್ಲಿ ಎಷ್ಟು ಕಿ.ಮೀ. ಡಾಂಬರೀಕರಣವಾಗಿದೆ?

ಶ್ರೀ ಶಿವಾನಂದ ಪೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು):

ಅ) ಕಡೂರು ತಾಲ್ಲೂಕಿನಲ್ಲಿ 2 ರಾಜ್ಯ ಹೆದ್ದಾರಿಗಳು ಹಾದು ಹೋಗುತ್ತಿದ್ದು, ಇದರ ಒಟ್ಟು ಉದ್ದ ಕಡೂರು ತಾಲ್ಲೂಕಿಗೆ ಸಂಬಂಧಿಸಿದಂತೆ 50 ಕಿ.ಮೀ. ಗಳಾಗಿರುತ್ತದೆ. ಅವುಗಳ ವಿವರ ಕೆಳಕಂಡಂತಿದೆ

1. ಕಡೂರು ಬಂಟ್ವಾಳವನ್ನು ಚಿಕ್ಕಮಗಳೂರು ಮೂಡಿಗೆರೆ ಬೆಳ್ತಂಗಡಿ ಮಾರ್ಗವಾಗಿ ಸೇರುವ ರಾಜ್ಯ ಹೆದ್ದಾರಿ (20 ಕಿ.ಮೀ. ಉದ್ದ)
2. ತುಮಕೂರು ಹೊನ್ನಾವರವನ್ನು ತಿಪಟೂರು, ಗುಬ್ಬಿ, ಕಡೂರು ಮಾರ್ಗವಾಗಿ ಸೇರುವ ರಾಜ್ಯ ಹೆದ್ದಾರಿ (30 ಕಿ.ಮೀ.)